ನಿಂತು ನಿರುಕಿಸಿದಾಗ, ಅವರ ತಿಳಿವಳಿಕೆಯು ವ್ಯಕ್ತಿತ್ವದ 'ಇಂಟೆಗ್ರಿಟಿ'ಯನ್ನು ಕೇಂದ್ರವಾಗಿ ಹೊಂದಿತ್ತೆಂದು ತೋರುತ್ತದೆ. 'ಮೌಲ್ಯನಿಷ್ಠೆ', 'ಪ್ರಾಮಾಣಿಕತೆ' ಮತ್ತು ನೈತಿಕತೆಗಳು ಅವರ ಆಯ್ಕೆಗಳಾದವು. ಒಳಿತು ಕೆಡುಕುಗಳ ನಡುವಿನ ಸಂಕೀರ್ಣ ಸಂಬಂಧವನ್ನು ಸೃಜನಶೀಲವಾಗಿ ಪರಿಶೀಲಿಸಿದಾಗ ಬರುವ ಒಳನೋಟಗಳು ಅಲ್ಲಿ ಅಪರಿಚಿತ. 'ನೈತಿಕತೆ'ಯಂತಹ ದತ್ತ ಆಕೃತಿಗಳ ಚಲನಶೀಲತೆಯು ಅವರಿಗೆ ಹೊಳೆಯಲಿಲ್ಲ. ಇಂಥ ಮನಸ್ಸು ಧರ್ಮ, ಅನುಭಾವ ಮುಂತಾದ ವಿದ್ಯಮಾನಗಳನ್ನು ಕಡೆಗಣ್ಣಿನಿಂದಲೂ ನೋಡುವುದಿಲ್ಲ. ಅವುಗಳ 'ಸಾಂಸ್ಥಿಕ' ಮತ್ತು 'ವೈಯಕ್ತಿಕ' ನೆಲೆಗಳ ನಡುವೆ ಇರುವ ಸಂಬಂಧವನ್ನು ಗುರುತಿಸುವುದಿಲ್ಲ. ಇದು ಕುವೆಂಪು ಮತ್ತು ಕಾರಂತರಿಗಿರುವ ಮುಖ್ಯ ವ್ಯತ್ಯಾಸಗಳಲ್ಲಿ ಒಂದು. ನಾಯಕರ ಮನಸ್ಸು ಕಾರಂತರ ಕಡೆಯೇ ಇತ್ತು.

ಒಬ್ಬ ವಿಮರ್ಶಕನ ಸ್ವರೂಪವು ಅವನು ಅಧ್ಯಯನಕ್ಕೆಂದು ಆರಿಸಿಕೊಳ್ಳುವ ಸಾಹಿತ್ಯದ ಸ್ವರೂಪದಿಂದಲೂ ಗೊತ್ತಾಗುತ್ತದೆ. ಅವನ ಆಯ್ಕೆಯು ಅವನ ಅಭಿರುಚಿ ಮತ್ತು ಧೋರಣೆಗಳಿಗೆ ಹಿಡಿದ ಕನ್ನಡಿ. ಆ ಲೆಕ್ಕದಲ್ಲಿ ನೋಡಿದರೆ ನಾಯಕರ ಒಟ್ಟು ಬರವಣಿಗೆಯ ಪ್ರಮಾಣ ಕಡಿಮೆ. ಅವರು ಸುಮಾರು ಅರವತ್ತು ವರ್ಷಗಳಲ್ಲಿ ಬರೆದಿದ್ದು ಹೆಚ್ಚೆಂದರೆ 2500 ಪುಟಗಳಿರಬಹುದು. ಅವುಗಳಲ್ಲಿ ಸಾಹಿತ್ಯಕವೆಂದು ಕರೆಯಲಾಗದ ಸಾಮಾಜಿಕ ಸಂಗತಿಗಳನ್ನು ಕುರಿತು ಸಾಕಷ್ಟು ಬರೆದಿದ್ದಾರೆ. ಮುನ್ನುಡಿಗಳಂತಹ ಸಾಮಯಿಕ ಸನ್ನಿವೇಶಗಳನ್ನು ಹೊರತುಪಡಿಸಿದರೆ ಅವರ ಪರಿಶೀಲನೆಯ ವ್ಯಾಪ್ತಿಯೊಳಗೆ ಬಂದ ಲೇಖಕರ ಸಂಖ್ಯೆ ಬಹಳ ಕಡಿಮೆ. ಅದರಲ್ಲಿ ಶಿವರಾಮ ಕಾರಂತರದೇ ಸಿಂಹಪಾಲು ಆಗಿರಲು ಆ ಲೇಖನಗಳು ನಾಯಕರು ಮುಗಿಸದೆ ಹೋದ ಪಿಎಚ್.ಡಿ. ಅಧ್ಯಯನದ ಭಾಗಗಳಾಗಿರುವುದೂ ಒಂದು ಕಾರಣ. ಉಳಿದಂತೆ ಕನ್ನಡದ ಹತ್ತು ಹಲವು ಲೇಖಕರು, ಕಿರಿಯ ಪೀಳಿಗೆಯವರು, ಲೇಖಕಿಯರು ಮತ್ತು ಕಾಲದಿಂದ ಕಾಲಕ್ಕೆ ಮೂಡಿ ಬರುವ ಸಾಹಿತ್ಯಕ ಸಮಸ್ಯೆಗಳ ಬಗ್ಗೆ ಅವರು ಬರೆಯಲೇ ಇಲ್ಲ. ಅವರು ಬಂಡಿಗಟ್ಟಲೆ ಬರೆದು ರಾಶಿ ಹಾಕಬೇಕಿತ್ತೆಂದು ನನ್ನ ಅಭಿಪ್ರಾಯವಲ್ಲ. ಆದರೆ, ಒಬ್ಬ ವಿಮರ್ಶಕನು ಬೆಳೆದುಬಂದ ಬಗೆಯನ್ನು ಅರ್ಥ ಮಾಡಿಕೊಳ್ಳಲು ಅವನ ಬರವಣಿಗೆಯ 'ಇನ್‌ಕ್ಲೂಸಿವ್‌ನೆಸ್' ಕೂಡಾ ಮುಖ್ಯವಾಗುತ್ತದೆ. ಬರೆದರೆ 'ಅತ್ಯುತ್ತಮ'ವಾಗಿಯೇ ಬರೆಯಬೇಕೆಂಬ ನಾಯಕರ ಹಂಬಲವು ಅವರ ಬರವಣಿಗೆಯ ಪ್ರಮಾಣವನ್ನು ಕುಗ್ಗಿಸಿತೆಂದೇ ತೋರುತ್ತದೆ. 'ಥ್ಯಾಂಕ್‌ಲೆಸ್' ಆದ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಕೊಂಡಿದ್ದೂ ಇದಕ್ಕೆ ಸ್ವಲ್ಪ ಮಟ್ಟಿಗೆ ಕಾರಣ.

ಜಿ.ಎಚ್. ನಾಯಕರು ಸಂಪಾದಿಸಿದ ಕೃತಿಗಳು ವಿಶೇಷ ಗೌರವವನ್ನು ಪಡೆದುಕೊಂಡಿವೆ. ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿದ 'ಕನ್ನಡ ಸಣ್ಣ ಕಥೆಗಳು' (1978), ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಹೊಸಗನ್ನಡ ಕವಿತೆ'(1985), ಅಂಕೋಲಾದ ವಿಷ್ಣುನಾಯಕರ ರಾಘವೇಂದ್ರ ಪ್ರಕಾಶನವು ಪ್ರಕಟಿಸಿದ 'ಶತಮಾನದ ಕನ್ನಡ ಸಾಹಿತ್ಯ'ದ ಎರಡು ಸಂಪುಟಗಳು, (2000, 2009) ಇವುಗಳಲ್ಲಿ ಮುಖ್ಯವಾದವು. ಈ ಸಂಪುಟಗಳನ್ನು ರೂಪಿಸಿದ ಅಭಿರುಚಿ, ಪ್ರಾಮಾಣಿಕತೆ ಮತ್ತು ವಸ್ತುನಿಷ್ಠತೆ ಎಲ್ಲರ ಮೆಚ್ಚುಗೆಯನ್ನು ಪಡೆದಿವೆ.

ಸ್ವಾತಂತ್ರ್ಯದ ಆಸುಪಾಸಿನಲ್ಲಿ ಹುಟ್ಟಿದ/ ವಿದ್ಯಾಭ್ಯಾಸ ಮಾಡಿದ ಕೆಲವು ಪೀಳಿಗೆಗಳವರು 'ವೈಚಾರಿಕತೆ', 'ರ್‍ಯಾಶನಲಿಸಂ', 'ವೈಜ್ಞಾನಿಕ ಮನೋಧರ್ಮ' ಮುಂತಾದ ಪರಿಕಲ್ಪನೆಗಳ ತೀವ್ರ ಪ್ರಭಾವಕ್ಕೆ ಒಳಗಾದವರು. ನಾಯಕರ ಪೀಳಿಗೆ ಮತ್ತು ನನ್ನ ಪೀಳಿಗೆಗಳೂ ಈ ವಾಸ್ತವಕ್ಕೆ ಎದುರಾದವರೇ. ಇದು ಸಂಪೂರ್ಣ ತಪ್ಪೆಂದು ನಾನು ಈಗಲೂ ಹೇಳುವುದಿಲ್ಲ. ಆದರೆ ಕಲಾಕೃತಿಗಳ ಅನುಸಂಧಾನದಲ್ಲಿ ತೊಡಗಿಕೊಂಡಾಗ ಕೆಲವೊಮ್ಮೆ ಇವು 'ತಡೆಗೋಡೆ'ಗಳಾಗುತ್ತವೆ. ನಮ್ಮ ನಿಲುಕಿಗೆ ಸಿಗದ ಹಲವು ಸಂಗತಿಗಳನ್ನು ನಾವು ಬದಿಗೆ ತಳ್ಳುತ್ತೇವೆ. ವಿಜ್ಞಾನದ ಪಾಸಿಟಿವ್ ಗುಣಗಳನ್ನು ಗಮನಿಸುತ್ತಾ ಅದರ ಸೃಷ್ಟಿ ಮತ್ತು ಶಿಕ್ಷಣಗಳ ಹಿಂದೆ ಇರುವ 'ರಾಜಕೀಯ ಮತ್ತು ಸಾಮಾಜಿಕ' ಆಯಾಮಗಳನ್ನು ಗಮನಿಸುವುದಿಲ್ಲ. ಆಗ ವಿಜ್ಞಾನವು ಹಲವು ಬಗೆಯ ಪರ್ಯಾಯ ತಿಳಿವಳಿಕೆಗಳನ್ನು ನಾಶ ಮಾಡುವ ಬಡಿಗೆಯಾಗಿಬಿಡುತ್ತದೆ. ಇದು ವಿಜ್ಞಾನದ ತಪ್ಪಲ್ಲ. ಬದಲಾಗಿ ಅದು ಸರ್ವಶಕ್ತವೆಂದು ನಂಬುವ 'ಸೈಂಟಿಸಂ'ನ ತಪ್ಪು. ಇಪ್ಪತ್ತನೆಯ ಶತಮಾನದಲ್ಲಿ ಬದುಕಿ ಬರೆದ ನಾವು ಹಲವರು ಈ ಬಲೆಯಲ್ಲಿ ಸಿಲುಕಿದವರೇ.